**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>**

**<u>ಎಸ್.ಸಿ.ನಂ.145/2022</u>**

ಫಿರ್ಯಾದುದಾರರ : ಸರ್ಕಾರದ ಪರ ತಲಘಟ್ಟಪುರ ಪೊಲೀಸರು

ವಿರುದ್ಧ

ಆರೋಪಿಗಳು : ಎ 1. ರಿಯಾಜ್ ಪಾಷ
ತಂದೆಃ ಹುಸೇನ್ ಸಾಬ್,
ವಯಸ್ಸುಃ 43 ವರ್ಷ,
ವಾಸಃ ಮನೆ ನಂ.288,
ಜೆ.ಪಿ.ನಗರ 9 ನೇ ಫೇಸ್,
ಆವಲಹಳ್ಳಿ, ಅಂಜನಪುರ ಅಂಚೆ,
ಬೆಂಗಳೂರು.

ಎ 3. ಮಹಮ್ಮದ್ ಅಶ್ರಫ್ @ ಗಬ್ಬರ್
ತಂದೆಃ ಮಹಮ್ಮದ್ ಆರೀಫ್,
ವಯಸ್ಸುಃ 27 ವರ್ಷ,
ಆವಲಹಳ್ಳಿ, ಬಿಡಿಎ ಕ್ವಾಟ್ರಸ್,
ಜೆ.ಪಿ.ನಗರ 9 ನೇ ಹಂತ,
ಅಂಜನಪುರ ಅಂಚೆ,
ಬೆಂಗಳೂರು.

ಎ 4. ಸಯ್ಯದ್ ನದೀಮ್
ತಂದೆಃ ನಜೀರ್ ಅಹಮ್ಮದ್,
ವಯಸ್ಸುಃ 31 ವರ್ಷ,
ವಾಸಃ ನಂ.789, 6 ನೇ ಕ್ರಾಸ್,
ಗುರುಕುಲ ಸ್ಕೂಲ್ ಮುಂಭಾಗ,
ಆವಲಹಳ್ಳಿ, ಅಂಜನಪುರ ಪೋಸ್ಟ್,
ಬೆಂಗಳೂರು.

ಎ 5. ನಯೀಂ ಇರ್ಫಾನ್,
ವಾಸಃ ಬೆಂಗಳೂರು,
ಕರ್ನಾಟಕ.

**<u>ದೋಷಾರೋಪಣೆ</u>**

ನಾನು ಎಮ್.ಎಲ್.ರಘುನಾಥ್, ಬಿ.ಎ., ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ನಿಮ್ಮ – 1 ಮತ್ತು 3 ರಿಂದ 5 ನೇ ಆರೋಪಿತರ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕಃ 11-06-2022 ರಂದು ಸಂಜೆ ಸುಮಾರು 06:30 ರಿಂದ 08ಃ00 ಗಂಟೆ ಸಮಯದಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯ ತಲಘಟ್ಟಪುರ ಪೊಲೀಸ್ ಠಾಣಾ ಸರಹದ್ದು, ಆವಲಹಳ್ಳಿ ಗ್ರಾಮದ ಗೊಟ್ಟಿಗೆರೆ ರಸ್ತೆಯ ಎಂ.ಆರ್.ಪಿ.ಎಲ್ ಪೆಟ್ರೋಲ್ ಬಂಕ್ ಹಿಂಭಾಗದ ಕಚ್ಚಾ ರಸ್ತೆಯಲ್ಲಿ, 1 ಮತ್ತು 3 ರಿಂದ 5 ನೇ ಆರೋಪಿತರಾದ ನೀವು 2 ನೇ ಆರೋಪಿಯೊಂದಿಗೆ ಸೇರಿಕೊಂಡು ದರೋಡೆ ಮಾಡುವ ಉದ್ದೇಶದಿಂದ ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ ಲಾಂಗು, ಕಬ್ಬಿಣದ ಪೈಪ್ ಮತ್ತು ಖಾರದ ಪುಡಿ ಪ್ಯಾಕೆಟ್ ಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಒಂಟಿಯಾಗಿ ಓಡಾಡುವ ಸಾರ್ವಜನಿಕರನ್ನು ಮತ್ತು ವಾಹನ ಸವಾರರನ್ನು ತಡೆದು ಅವರನ್ನು ಹೆದರಿಸಿ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಆಭರಣ ಮತ್ತು ಮೊಬೈಲ್ ಫೋನ್ ಗಳನ್ನು ದೋಚಲು ಸಿದ್ಧತೆ ನಡೆಸಿದ್ದು ಮತ್ತು ಈ ಕಾರಣದಿಂದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 399 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೇಯದಾಗಿ, 1 ಮತ್ತು 3 ರಿಂದ 5 ನೇ ಆರೋಪಿತರಾದ ನೀವು 2 ನೇ ಆರೋಪಿಯೊಂದಿಗೆ ಸೇರಿಕೊಂಡು, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದರೋಡೆ ಮಾಡುವ

ಉದ್ದೇಶಕ್ಕಾಗಿ ಅಕ್ರಮವಾಗಿ ಗುಂಪು ಸೇರಿಕೊಂಡಿದ್ದು ಮತ್ತು ಈ ಕಾರಣದಿಂದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 402 ಮತ್ತು Arms Act ಕಲಂ 25 ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 1 ನೇ ಮಾರ್ಚ್, 2024)**

**(ಎಮ್.ಎಲ್.ರಘುನಾಥ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.